ಕರ್ನಾಟಕಸರ್ಕಾರ
**ತಾಂತ್ರಿಕ ಶಿಕ್ಷಣ ಇಲಾಖೆ**

ಸಂಖ್ಯೆ: ಡಿಟಿಇ 03 ಇಎಸ್‌ಟಿ(8) 2025

ಆಯುಕ್ತರಕಛೇರಿ,
ಕಾಲೇಜು ಮತ್ತುತಾಂತ್ರಿಕ ಶಿಕ್ಷಣ ಇಲಾಖೆ,
ತಾಂತ್ರಿಕ ಭವನ, ಅರಮನೆ ರಸ್ತೆ,
ಬೆಂಗಳೂರು-01, ದಿ:10-06-2025.

**ಸುತ್ತೋಲೆ**

ವಿಷಯ: 2025-26 ನೇ ಸಾಲಿನ ತಾಂತ್ರಿಕ ಶಿಕ್ಷಣ ಇಲಾಖೆಯ ಬೋಧಕರ ವರ್ಗಾವಣೆ ಪ್ರಕ್ರಿಯೆಯನ್ನು ಕೈಗೊಳ್ಳುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 137 ಡಿಟಿಇ 2020 ದಿನಾಂಕ:29/01/2021 ರಂತೆ ಅಧಿಸೂಚಿಸಲಾದ ತಾಂತ್ರಿಕ ಶಿಕ್ಷಣ ಇಲಾಖೆಯ ಬೋಧಕರ ವರ್ಗಾವಣೆ ನಿಯಂತ್ರಣ ನಿಯಮಗಳು-2021 ಹಾಗೂ ತಿದ್ದುಪಡಿ ಅಧಿಸೂಚನೆ ದಿನಾಂಕ:29/06/2021.
2. ಈ ಕಛೇರಿ ಸುತ್ತೋಲೆ ಸಂಖ್ಯೆ: ಡಿಟಿಇ 17 ಇಎಸ್‌ಟಿ (8) 2024 ದಿ:03/04/2025 ಮತ್ತು 22/04/2025.
3. ಈ ಕಛೇರಿ ಸಮ ಸಂಖ್ಯೆಯ ಪ್ರಕಟಣೆ ದಿನಾಂಕ:19/05/2025
4. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 465ಟಿಇಸಿ2024 ದಿನಾಂಕ:29/05/2025.

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ-(3)ರಲ್ಲಿ 2025-26ನೇ ಸಾಲಿನ ತಾಂತ್ರಿಕ ಶಿಕ್ಷಣ ಇಲಾಖೆಯ ಬೋಧಕರ ವರ್ಗಾವಣೆ ಪ್ರಕ್ರಿಯೆಯನ್ನು ಕೈಗೊಳ್ಳುವ ಸಂಬಂಧ, ಈಗಾಗಲೇ ಕರಡು ವೇಳಾಪಟ್ಟಿಯನ್ನು ನಿಗಧಿಪಡಿಸಿ ಪ್ರಕಟಣೆ ಹೊರಡಿಸಲಾಗಿದೆ. ಈ ಸಂಬಂಧ, ವೈದ್ಯಕೀಯ ಮಂಡಳಿಯಿಂದ ಪರಿಶೀಲಿಸಲ್ಪಡುವ ಬೋಧಕರು ಮೂಲ ದಾಖಲಾತಿಗಳನ್ನು ಹಾಗೂ ಪ್ರಾಚಾರ್ಯರರಿಂದ ದೃಢೀಕರಿಸಿದ ದಾಖಲೆಗಳನ್ನು ಸಲ್ಲಿಸಲು ಸೂಚಿಸಿದೆ. ಸರಿಯಾದ ದಾಖಲೆಗಳನ್ನು ಸಲ್ಲಿಸದೇ, ಮಂಡಳಿಯು ತಿರಸ್ಕರಿಸಿದರೆ ಅದಕ್ಕೆ ತಾವುಗಳೇ ಹೊಣೆಗಾರರೆಂದು ಈ ಮೂಲಕ ತಿಳಿಸಲಾಗಿದೆ.

ವಿಶೇಷಚೇತನ ಸಿಬ್ಬಂದಿಗಳಿಗೆ ವೈದ್ಯಕೀಯ ತಪಾಸಣೆಯ ಸಂಬಂಧ, ಕೆಲವು ಆಸ್ಪತ್ರೆಗಳಿಂದ ಕರೆ ಬಂದಿರುವುದು ಗಮನಕ್ಕೆ ಬಂದಿರುತ್ತದೆ. ಸದರಿ ವಿಶೇಷಚೇತನ ಪ್ರಕರಣದಡಿ ವರ್ಗಾವಣೆ/ ವಿನಾಯತಿ ಕೋರಿ ಅರ್ಜಿ ಸಲ್ಲಿಸಿರುವ ಬೋಧಕ ಸಿಬ್ಬಂದಿಗಳು (ಸದರಿ ಖೋಟದಡಿ ನೇಮಕಾತಿ ಹೊಂದಿದವರನ್ನು/ಈ ಹಿಂದೆ ಸದರಿ ಕ್ಲೇಮ್ ಪರಿಶೀಲನೆಗೊಂಡವರನ್ನು ಹೊರತುಪಡಿಸಿ) ಹೊಸದಾಗಿ ತಾವು ವಿಶೇಷಚೇತನದಡಿ ಈಗಾಗಲೇ ಅರ್ಜಿ ಸಲ್ಲಿಸಿದ್ದಲ್ಲಿ, ಸಂಬಂಧಿಸಿದ ಪ್ರಾಚಾರ್ಯರರಿಂದ ದೃಢೀಕರಿಸಿದ ಸಕ್ಷಮ ಪ್ರಾಧಿಕಾರ ನೀಡಿದ UDID ಸಂಖ್ಯೆ ಹೊಂದಿರುವ ವೈದ್ಯಕೀಯ ದಾಖಲೆಗಳನ್ನು E-Mail ವಿಳಾಸ:**dteesttransfer@gmail.com**ಕ್ಕೆ ದಿನಾಂಕ:14.06.2025ರೊಳಗೆ ಕಳುಹಿಸುವುದು ಹಾಗೂ ತತ್ಸಂಬಂಧ **ತಾವುಗಳು ಪ್ರತ್ಯೇಕ**

Scanned with CamScanner

**ವೈದ್ಯಕೀಯ ಪರಿಶೀಲನೆಗೆ ಹಾಜರಾಗುವ ಅಗತ್ಯವಿರುವುದಿಲ್ಲ**. ಈ ಬಗ್ಗೆ ಸಂಬಂಧಿಸಿದ ವೈದ್ಯಕೀಯ ಪ್ರಾಧಿಕಾರಕ್ಕೆ ಮಾಹಿತಿ ನೀಡಲಾಗುವುದು.

ಉಲ್ಲೇಖ (4) ರ ಸರ್ಕಾರದ ಅಧಿಸೂಚನೆಯಲ್ಲಿ ಕರ್ನಾಟಕ ಸಿವಿಲ್ ಸೇವೆಗಳ (ತಾಂತ್ರಿಕ ಶಿಕ್ಷಣ ಇಲಾಖೆಯ ಬೋಧಕ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) ನಿಯಮಗಳು, 2021ರ 4ನೇ ನಿಯಮದ ಉಪ ನಿಯಮ (4) ರ ಖಂಡ (ಬಿ) ನಂತರದಲ್ಲಿ ಈ ಕೆಳಕಂಡಂತೆ ಸೇರಿಸತಕ್ಕದ್ದು, ಎಂದರೆ:- "(ಸಿ) ಪರಂತು, ಈ ನಿಯಮಗಳಲ್ಲಿ ಏನೇ ಒಳಗೊಂಡಿದ್ದರೂ ಬೋಧಕರು ತೀವ್ರತರ ಅಂಗವೈಕಲ್ಯತೆಯನ್ನು ಹೊಂದಿದ್ದರೆ ಮತ್ತು ಬೋದಕರ ಪತಿ, ಮಕ್ಕಳು ಮತ್ತು ಅವಲಂಬಿತ ತಂದೆ-ತಾಯಿ, ಇವರುಗಳು ತೀವ್ರತರ ಅಂಗವೈಕಲ್ಯತೆಯನ್ನು ಹೊಂದಿದ್ದರೆ ಕೋರಿಕೆ ಸಲ್ಲಿಸದ ಹೊರೆತು ವರ್ಗಾವಣೆ ಮಾಡತಕ್ಕದ್ದಲ್ಲ ಮತ್ತು ಉಪನಿಯಮ (1) ರಲ್ಲಿ ನಿಗಧಿಪಡಿಸಲಾದ ಕನಿಷ್ಠ ಸೇವಾವಧಿಯನ್ನು ಪೂರೈಸಿಲ್ಲದಿದ್ದರೂ, ಅವರ ವರ್ಗಾವಣೆ ಕೋರಿಕೆಯನ್ನು ಪರಿಗಣಿಸತಕ್ಕದ್ದು" ಎಂದು ಕರಡು ನಿಯಮಗಳನ್ನು ಹೊರಡಿಸಲಾಗಿದೆ ಇದರನ್ವಯ ವಿನಾಯತಿ ಬಯಸುವ ಬೋಧಕ ಸಿಬ್ಬಂದಿಗಳು ಅರ್ಹ ದಾಖಲೆಗಳನ್ನು ಪ್ರಾಚಾರ್ಯರಿಂದ ದೃಢೀಕರಿಸಿ ದಿನಾಂಕ:14.06.2025ರೊಳಗೆ E-mail ಕಳುಹಿಸಲು ಸೂಚಿಸಲಾಗಿದೆ.

ವಿಶೇಷ ಪ್ರಕರಣದಡಿ (ಗಂಭೀರ ಸ್ವರೂಪದ/ಕೊನೆಯ ಹಂತದ ಖಾಯಿಲೆ) ವೈದ್ಯಕೀಯ ಪರಿಶೀಲನೆಗೆ ಸಂಬಂಧಿಸಿದಂತೆ, ವೈದ್ಯಕೀಯ ಮಂಡಳಿ/ಆಸ್ಪತ್ರೆಯಿಂದ ದಿನಾಂಕ ಇದುವರೆಗೂ ನಿಗದಿಪಡಿಸಿರುವುದಿಲ್ಲ, ಆದ್ದರಿಂದ ಉಲ್ಲೇಖ-(3) ರಲ್ಲಿ ನಿಗದಿಪಡಿಸಿರುವ ತಾತ್ಕಾಲಿಕ ವೇಳಾಪಟ್ಟಿಯು ಬದಲಾವಣೆಗೆ ಒಳಗೊಳ್ಳುತ್ತಿದ್ದು, ವೈದ್ಯಕೀಯ ಮಂಡಳಿಯಿಂದ ಆಸ್ಪತ್ರೆಗಳು/ದಿನಾಂಕ/ಸ್ಥಳ ನಿಗಧಿಪಡಿಸಿದ ತರುವಾಯ ಪರಿಷ್ಕೃತ ವೇಳಾಪಟ್ಟಿಯನ್ನು ಸುತ್ತೋಲೆ ಮೂಲಕ ಸದ್ಯದಲ್ಲಿ ಪ್ರಕಟಿಸಲಾಗುವುದು.

Manjula 12/6/25.

ಆಯುಕ್ತರು

ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

**ವಿಶೇಷ ಸೂಚನೆ: ಎಲ್ಲಾ ವಿಶೇಷ ಪ್ರಕರಣಗಳಲ್ಲಿ ಅರ್ಜಿ ಈಗಾಗಲೇ ಸಲ್ಲಿಸಿರುವ ಬೋಧಕ ಸಿಬ್ಬಂದಿಗಳು ಮಾತ್ರ ಪ್ರಾಚಾರ್ಯರಿಂದ ದೃಢೀಕರಿಸಿದ ದಾಖಲಾತಿಗಳನ್ನು ಮೇಲೆ ಸೂಚಿಸಿರುವ ನಿಗದಿತ ದಿನಾಂಕದೊಳಗೆ ಸಲ್ಲಿಸುವುದು**

ಇವರಿಗೆ,

ಎಲಾ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಸರ್ಕಾರಿ ಪಾಲಿಟೆಕ್ನಿಕ್ ಮತ್ತು ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳ ಪ್ರಾಂಶುಪಾಲರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ

ಪ್ರತಿಯನ್ನು:

1. ಮಾನ್ಯ ಆಯುಕ್ತರ ಆಪ್ತ ಶಾಖೆಗೆ,
2. ಮಾನ್ಯ ನಿರ್ದೇಶಕರ ಆಪ್ತ ಶಾಖೆಗೆ
3. ಜಂಟಿ ನಿರ್ದೇಶಕರು (ಆಡಳಿತ) ಆಪ್ತ ಶಾಖೆಗೆ
4. ಇ-ಆಡಳಿತ ವಿಭಾಗಕ್ಕೆ ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಚುರ ಪಡಿಸಲು
5. ಕಛೇರಿ ಪ್ರತಿ

Scanned with CamScanner